**ಪ್ರಮಾಣೀಕರಿಸಲಾದ ದಿನಾಂಕ : 07.03.2026.**

**<u>ವಾಟೀ ಸವಾಲು : ಪ್ರತಿವಾದಿ ಪರ ಶ್ರೀ. ಎಂ ಡಿ ಕೆ ವಕೀಲರಿಂದ</u> :-**

ಪ್ರತಿವಾದಿಗಳ ವಿರುದ್ದ ವಾದಿಗೆ ಈ ದಾವೆಯನ್ನು ಹೊರತು ಪಡಿಸಿ ಬೇರೆ ಎಷ್ಟು ದಾವೆಗಳನ್ನು ಹೂಡಿದ್ದಾರೆ ಎಂದು ನನಗೆ ತಿಳಿದಿಲ್ಲ. ವಾದಿಯ ಮಗನ ಭಾವಚಿತ್ರವನ್ನು ನಾನು ನೋಡಿದ್ದಲ್ಲಿ ನಾನು ಗುರತಿಸಬಲ್ಲೆ. ನಿಪಿ-1ರಲ್ಲಿರುವ ವಾದಿಯಮಗನ ಭಾವಚಿತ್ರವನ್ನು ನೋಡಿ ಗುರುತಿಸಿರುತ್ತಾರೆ . ನಿಪಿ-1ರಲ್ಲಿ ಇರುವ 1ನೇ ಪ್ರತಿವಾದಿ ಹಾಗೂ ನ್ಯಾಯಾಲಯದ ಮಂದೆ ಇರುವ

1ನೇ ಪ್ರತಿವಾದಿ ಒಬ್ಬರೇ ಎಂದು ನೋಡಿ ಗುರುತಿಸಿರುತ್ತಾರೆ . ನಿಪಿ-1 ವಾದಿಯ ಮಗ ಹಾಗೂ 1ನೇ ಪ್ರತಿವಾದಿಯ ಜಂಟಿ ಭಾವಚಿತ್ರ ಎಂದರೆ ಸರಿ . ವಾದಿಯ ಮಗ ನನಗೆ ಪರಿಚಯ ಇದ್ದು ಆತನು ಯಾವುದೇ ಮದುವೆ ಆಟರುವುದಿಲ್ಲ ಎಂದು ನನಗೆಖುದ್ದು ಮಾಹಿತಿ ಇದೆ ಏಕೆಂದರೆ ನಾನು ಸಣ್ಣವಯಸ್ಸಿನಿಂದಲೂ ವಾದಿ ಹಾಗೂ ಅವರ ಮಗನೊಂದಿಗೆ ಒಳನಾಟ ಇಟ್ಟುಕೊಂಡಿದ್ದೇನೆ . ವಾದಿಯ ಮಗ ನನಗಿಂತ ಸಣ್ಣ ವಯಸ್ಸಿ ನವನಾಗಿದ್ದು ಅವರೂ ನನ್ನ ನಡುವೆ ಸುಮಾರು 20 ವರ್ಷಗಳ ಅಂತರ ಇದೆ . ಈ ದಾವೆಯು ಸುಮಾರು 10 ವರ್ಷಗಳಿಂದ ನಡೆಯುತ್ತಿದೆ ಎಂಬ ಸಂಗತಿ ನನಗ ತಿಳಿದಿದೆ . ಈ ದಾವೆ 10 ವರ್ಷಗಳಿಂದ ಹಾಕಿದ್ದಾರೆ ಎಂದು ನನಗೆ ತಿಳಿದಿದೆ . ಈ ದಾವೆಯನ್ನು 10 ವ ರ್ಷಗಳ ಹಿಂದೆ ವಾದಿಯು ಪ್ರತಿವಾದಿಯ ವಿರುದ್ದ ಈ ನ್ಯಾಯಾಲಯದಲ್ಲಿ ಹೂಡಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ನನ್ನ ಪ್ರಮಾಣ ಪತ್ರದಲ್ಲಿ '' ಅವರನ್ನು ನಾನು ಯಾವತ್ತಿಗೂ ನೋಡಿರಲಿಲ್ಲ '' ಎಂದು ಹೇಳಿದ್ದು ಅವರು ಎಂದರೆ 1ನೇ ಪ್ರತಿವಾದಿ . ನನ್ನ ಪ್ರಮಾಣ ಪತ್ರದಲ್ಲಿ 1ನೇ ಪ್ರತಿವಾದಿ ಎಂದು ಖಚಿತವಾಗಿ ಎಲ್ಲಿಯೂ ನಮೂದು ಮಾಡಿಲ್ಲ ಎಂದರೆ ನಾನು ಪ್ರಮಾಣ ಪತ್ರವನ್ನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ . ನನ್ನ ಪ್ರಮಾಣ ಪತ್ರವನ್ನು ನಮ್ಮ ವಕೀಲರು ಬರೆದಿದ್ದು ಅದಕ್ಕೆ ನಾನು ಓದಿ ನನ್ನ ಸಹಿ ಮಾಡಿರುತ್ತೇನೆ . ನಾನು ನನ್ನ ಪ್ರಮಾಣ ಪತ್ರಿಕೆಯಲ್ಲಿ 1ನೇ ಪ್ರತಿವಾದಿಯನ್ನ ನಿರ್ದಿಷ್ಟವಾಗಿ ನೋಡಿದ್ದಾರೆ ಎಂದು ಬೆರದಿದ್ದಾರೋ ಇಲ್ಲವೂ ಎಂದು ನಾನು ನೋಡಿರುವುದಿಲ್ಲ. ನಮ್ಮ ವಕೀಲರಿಗೆ ಪ್ರಮಾ ಣಪತ್ರವನ್ನು ಬರೆಯುವಾಗ ನನಗೆ 1ನೇ ಪ್ರತಿವಾದಿ ಗೊತ್ತಿಲ್ಲ ಎಂದು ನಿರ್ದಿಷ್ಟವಾಗಿ ನುಡಿದಿರುತ್ತೇನೆ . ನೀವು ಹಾಗೂ ವಾದಿಯು ರಕ್ತ ಸಂಬಂಧಿ ಎಂದರೆ ಸರಿಯಲ್ಲ . ಸಾಕ್ಷಿ ಮುಂದುವರೆದು ನಾವು ಕುಲಬಾಂಧವರು ಎಂದು ನುಡಿಯುತ್ತಾರೆ . 30 ವರ್ಪಗಳ ಹಿಂದೆ ನನಗೆ ವಯಸ್ಸು 24ವರ್ಷ ಎಂದರೆ ಸರಿ . 24 ವರ್ಪಗಳ ಹಿಂದೆ ವಾದಿಗೆ ಸುಮಾರು 44 ವರ್ಷ ವಯಸ್ಸಾಗಿತ್ತು. ಸದರಿ ವಯಸ್ಸಿ ನ ಅಂತರದಿಂದ ನಿಮ್ಮ ಹಾಗೂ ವಾದಿಯ ನಡುವೆ ಬಾಂಧವ್ಯ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಈ ಹಿಂದೆ ಹೇಳಿದ ಹಾಗೆ ವಾದಿಯು ನನ್ನ ಕುಲ ಬಾಂಧವರು ಎಂದರೆ ಸರಿ . ಆದಕಾರಣ ಅವರು ಎಂದಿಗೂ ಸ್ನೇಹಿತರಾಗಿ ಇರಲಿಲ್ಲ ಎಂದರೆ ಸರಿಯಲ್ಲ. ವಾದಿಯ ಮಗ ಹುಟ್ಟಿ 3 ವರ್ಷಗಳಿಂದ ನನಗೆ ಪರಿಚಯ ಇದೆ . ವಾದಿಯ ಮಗ 3-4 ವರ್ಷಗಳಿಂದ ವಯಸ್ಕನಾಗುವವರೆಗೂ ನಿಮ್ಮ ಹಾಗೂ ಅವರ ನಡುವೆ ಯಾವುದೇ ಸಂಪರ್ಕ ಇರಲಿಲ್ಲ ಎಂದರೆ ಸರಿಯಲ್ಲ. ವಾದಿಯ ಮಗ 10ನೇ ತರಗತಿ ಫೇಲ ಅಗಿರುತ್ತಾರೆ . ಆತನು ಖುದ್ದಾಗಿ ಯಾವುದೇ ವ್ಯಾಪಾರ ಮಾಡುತ್ತಿರಲಿಲ್ಲ. ವಾದಿಯ ಇಟ್ಟಿಗೆ ಫ್ಯಾಕ್ಟರಿಯನ್ನು ನೋಕೊಂಡು ಇದ್ದು ಅದಾದ ಬಳಿಕ ವ್ಯಾಪಾರ ಆರಂಭಿಸುವುದಾಗಿ ನುಡಿದಿದ್ದ. 10 ನೇ ತರಗತಿ ಫೇಲ ಆದ ಬಳಿಕ ಅವರ ತಂದೆಯ ವ್ಯಾಪಾರವನ್ನು ನೋಡಿಕೊಳ್ಳುತ್ತಿದ್ದು ಎಂದು ಹೇಳಿದ್ದು ಆ ಸಮಯಿದಲ್ಲಿ ಅವರು ಅಪ್ರಾಪ್ತ ವಯಸ್ಸಿ ನ

ಬಾಲಕ ಆಗಿದ್ದ ಎಂದರೆ ಸರಿ . ಅಪ್ರಾಪ್ತ ವಯಸ್ಸಾಗಿದ್ದಾಗ ವಾದಿಯ ಮಗನು ಯಾವುದೇ ವ್ಯವಹಾರವನ್ನು ನೋಡಿಕೊಳ್ಳುತ್ತಿರಲಿಲ್ಲ ಮನೆಯಲ್ಲಿಯೇ ಇದ್ದರು . ನಾನು ನನ್ನ ಪ್ರಮಾಣ ಪತ್ರದಲ್ಲಿ ಈ ದಾವಾ ಆಸ್ತಿಗೆ ಸಂಬಂಧಪಟ್ಟ ಎಲ್ಲಾ ಅಂಶಗಳನ್ನು ತಿಳಿದುಕೊಂಡಿದ್ದೇನೆ ಎಂದು ಎಲ್ಲಿಯೂ ಸಹ ನಮೂದು ಮಾಡಿಲ್ಲ. ವಾದಿಯು ಅವರ ಮಗನೊಂದಿಗೆ ಕೊನೆಯ ದಿನಗಳ ವರೆಗೂ ಅವರನ್ನು ನೋಡಿಕೊಂಡು ಚಿಕಿತ್ಸೆ ಕೊಡಿಸಿಕೊಂಡು ಇದ್ದರು . ವಾದಿಯ ಮಗ ಕೆಟ್ಟ ಚಟಗಳಿಗೆ ಯಾವವಯಸ್ಸಿನಿಂದ ಇಡಾಗಿದ್ದನು ಎಂದು ನನಗೆ ತಿಳಿದಿಲ್ಲ. ಸದರಿ ವಿಷಯದ ಬಗ್ಗೆ ವಾದಿಯು ನನ್ನ ಬಳಿ ಪ್ರಸ್ತಾಪ ಮಾಡಿರಲಿಲ್ಲ. ವಾದಿಯು ಅವನ ಮಗನ ಬಗ್ಗೆ 2008 ನೇ ಇಸವಿಯಲ್ಲಿ ತಿಳಿಸಿರುತ್ತಾರೆ . 2013-14 ನೇ ಇಸವಿಯಲ್ಲಿ ವಾದಿ ಅವರ ಆಸ್ತಿಯನ್ನು ಮಗನ ವ್ಯಾಪಾರಕ್ಕೆಂದು ಬರೆದುಕೊಟ್ಟಿರುತ್ತಾರೆ . ಆ ಸಮಯದಲ್ಲಿ ನಾನು ಇರಲಿಲ್ಲ. ವಾದಿಯು ಅವರ ಮಗನಿಗೆ ಖುಲಾಸೆ ಪತ್ರವನ್ನು ವ್ಯಾಪಾರ ಮಾಡಿಕೊಂಡು ಜೀವನ ನಡೆಸುವುದಕ್ಕೆ ಬರೆದುಕೊಟ್ಟಿರುತ್ತಾರೆ ಎಂದು ನನಗೆ ತಿಳಿಸಿರುತ್ತಾರೆ. ಸದರಿ ಖುಲಾಸೆ ಪತ್ರವನ್ನು ಇಂದಿನವರೆವಿಗೂ ಸಹ ನೋಡಿರುವುದಿಲ್ಲ. ನೀವು ಹೇಳಿರುವಂತೆ ಅಂಶಗಳು ಸದರಿ ಖುಲಾಸೆ ಪತ್ರದಲ್ಲಿ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಡಿ-4 ರ ಪ್ರಕಾರ ವಾದಿಯ ಮಗನು ಅವಿಭಕ್ತ ಕುಟುಂಬದಲ್ಲಿ ಸದಸ್ಯನಾಗಿ ಮುಂದುವರೆಯಲು ಆಗದೇ ಇರುವ ಕಾರಣ ಸದರಿ ಖುಲಾಸೆ ಪತ್ರವನ್ನು ಬೆರದುಕೊಟ್ಟಿದ್ದಾರೆ ಎಂದು ನಮೂದಾಗಿರುತ್ತದೆ ಎಂದರೆ ಸರಿ . ದಾವಾ ಆಸ್ತಿಯನ್ನು ಹೊರತು ಪಢಿಸಿ ವಾದಿಗೆ ಸೇರಿದ ಇತರೆ ಕುಟುಂಬದ ಆಸ್ತಿಗಳು ಇವೆ ಎಂದರೆ ಸರಿ . ಉಳಿದ ಆಸ್ತಿಗಳ ಬಗ್ಗೆ ನಾನು ಯಾವುದೇ ಮಾಹಿತಿಯನ್ನು ತಿಳಿದುಕೊಂಡಿರುವುದಿಲ್ಲ. ಖುಲಾಸೇ ಪತ್ರ ಬರೆದುಕೊಟ್ಟ ದಿನದಂದೇ ಆಸ್ತಿಯನ್ನು ಅವರ ಸ್ವಾಧೀನಕ್ಕೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿ . ಸದರಿ ದಾವಾ ಸ್ವತ್ತನ್ನು ವಾದಿಯ ಮಗನು ಬಾಡಿಗೆಗೆ ಬಿಟ್ಟಿದ್ದರು ಎಂದರೆ ಸರಿ . ನಿಡಿ-1 ರಿಂದ 3ರಂತೆ ಭಾವಚಿತ್ರ ಹಾಗೂ ಸಿಡಿ ಇದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದು ದಾವಾ ಆಸ್ತಿಗೆ ಸಂಬಂಧಿಸಿದ ಭಾವಚಿತ್ರ ಆಗಿರುತ್ತದೆ ಎಂದರೆ ಸರಿ . ನಿಡಿ-1 ಮತ್ತು 2ರಲ್ಲಿರುವ ವ್ಯಕ್ತಿಯ ಹೋಲಿಕೆ 1ನೇ ಪ್ರತಿವಾದಿಯಂತೆ ಇದೆ ಎಂದರೆ ಸರಿ . ಸದರಿ ಭಾವಚಿತ್ರವನ್ನು ದಾವಾ ಆಸ್ತಿಯ ಒಳಗೆ ತೆಗೆದಿರುತ್ತಾರೆ ಎಂದರೆ ಸಾಕ್ಷಿಯ ಮಳಿಗೆಯ ಆವರಣದಲ್ಲಿ ತೆಗೆದಿರುತ್ತಾರೆ ಎಂದು ನುಡಿಯುತ್ತಾರೆ . ನಿಡಿ-4ನ್ನು ವಾದಿಯವರೇ ಅವರ ಸ್ವಇಚ್ಚಯಿಂದ ಬರೆದುಕೊಟಿಟರುತ್ತಾರೆ ಆದರೆ ನೀವು ಹೇಳಿ ಬರೆಸಿರುವುದಿಲ್ಲ ಎಂದರೆ ಸರಿ . 2009-10 ನೇ ಸಾಲಿನಲ್ಲಿ ವಾದಿಯ ಮಗನಿಗೆ ಯಾವುದೇ ಮರಣಾಂತಿಕ ಕಾಯಿಲೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ನಿಡಿ-4 ಬರೆದುಕೊಟ್ಟ ಸಮುದಲ್ಲಿ ಅವರಿಗೆ ಯಾವುದೇ ಕಾಯಿಲೆ ಇರಲಿಲ್ಲ ಎಂದರೆ ಸರಿಯಲ್ಲ. ಆ ರೀತಿ ಅವರಿಗೆ ಕಾಯಿಲೆ ಇದ್ದಿದ್ದೆ ಆದ್ದಲ್ಲಿ ಅದನ್ನು ನಿಡಿ-4 ರಲ್ಲಿ ನಮೂದು ಮಾಡುತ್ತಿದ್ದರು ಎಂದರೆ ಸಾಕ್ಷಿಯು ಅದರಂತೆ ಯಾರೂ

ನಮೂದು ಮಾಡುವುದಿಲ್ಲ ಎಂದು ನುಡಿಯುತ್ತಾರೆ . ಆ ಸಮಯದಲ್ಲಿ ಅವರಿಗೇ ಯಾವುದೇ ಕಾಯಿಲೆ ಬಂದಿರಲಿಲ್ಲ ವಾದಿಯ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಹಾಗೂ ಅವರ ಮಗ ನಡುವೆ ಹೊಂದಾಣಿಕೆ ಇಲ್ಲದ ಕಾರಣ ಮನೆಯನ್ನು ಬಿಟ್ಟು ಹೋಗಿರುತ್ತಾನೆ ಎಂದರೆ ಸಾಕ್ಷಿ ಹೋಗಿ ಬರುತ್ತಿದ್ದ ಎಂದು ನುಡಿಯತ್ತಾರೆ . ವಾದಿ ಅವರ ಮಗನಿಗೆ ಮದುವೆಯನ್ನು ಮಾಡಲು ಪ್ರಯತ್ನ ಪಡುತ್ತಿದ್ದು ಅದರೆ ಅವನು ಕೈಗೆ ಸಿಗುತ್ತಿರಲಿಲ್ಲ. 1ನೇ ಪ್ರತಿವಾದಿ ಹಾಗೂ ವಾದಿಯ ಮಗನು ದಿಃ 12.04.2006 ರಂದು ಮದುವೆ ಆಗಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮದುವೆಯು ಸಿರಾ ತಾಲ್ಲೂಕಿನ ನರಸಿಂಹಸ್ವಾ ಮಿ ದೇವಾಲಯದಲ್ಲಿ ಆಗಿರುತ್ತಾರೆಎಂದರೆ ನನಗೆ ಗೊತ್ತಿಲ್ಲ. ದಿಃ 12.04.2006 ನೇ ಸಾಲಿನ ಮುನ್ನ ಅವರು ಮದಲುವೆ ಆಗಿರಲಿಲ್ಲ ಎಂದರೆ ಸಾಕ್ಷಿಯು ಸಾಯುವವರೆಗೂ ಮದುವೆ ಆಗಿರಲಿಲ್ಲ ಎಂದು ನುಡಿಯುತ್ತಾರೆ . ಮದುವೆ ಆದ ಬಳಿಕ ವಾದಿಯ ಮಗನು ತುಮಕೂರಿನಲ್ಲಿ 1ನೇ ಪ್ರತಿವಾದಿಯ ಜೊತೆ ದಾಂಪತ್ಯ ಜೀವನ ನಡೆಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. 2006ನೇ ಇಸವಿಯಲ್ಲಿ ಅವರಿಗೆ ಮರಣಾಂತಿಕ ಕಾಯಿಲೆ ಇತ್ತಾ ಇಲ್ಲವಾ ಎಂಬ ಬಗ್ಗೆ ನನಗೆ ತಿಳಿದಿರಲಿಲ್ಲ. ಸದರಿ ವಿಚಾರದ ಬಗ್ಗೆ ನಾನು ವಾದಿಯಿಂದ ತಿಳಿದುಕೊಳ್ಳಲು ಪ್ರಯತ್ನ ಪಟ್ಟಿರಲಿಲ್ಲ. ಅವರಿಬ್ಬರೂ ಮದುವೆ ಆಗಿ ಉಪನೊಂದಣಾಧಿಕಾರಿ ಕಚೇರಿಯಲ್ಲಿ ಪಡೆದಕೊಂಡಿರುವ ವಿವಾಹ ಪ್ರಮಾಣ ಪತ್ರವನ್ನು ತೋರಿಸಿದಾಗ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ . ವಾದಿಯ ಮಗ ಮರಣ ಹೊಂದುವ ಸಮಯದವರೆಗೂ 1ನೇ ಪ್ರತಿವಾದಿಯವರೇ ಅವರ ಯಾೀಗಕ್ಷೇಮವನ್ನು ನೋಡಿಕೊಳುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಅವರ ಜೀವತಾವಧಿಯಲ್ಲಿ 1ನೇ ಪ್ರತಿವಾದಿಯವರ ಜೊತೆ ಆಗಿರುವ ಮದುವೆಯ ಜೀವನವನ್ನು ಯಾರೂ ಕೂಡ ಪ್ರಶ್ನೆ ಮಾಡಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅವರು ಮರಣ ಹೊಂದಿದ ಬಳಿಕ ಅವರ ಅಂತಮ ಕ್ರಿಯಯನ್ನು 1ನೇ ಪ್ರತಿವಾದಿಯರೇ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ 1ನೇ ಪ್ರತಿವಾದಿ ಭಾಗವಹಿಸಿದ್ದರು ಎಂದರೆ ಸರಿಯಲ್ಲ. ವಾದಿಯ ಮಗನನ್ನು ನೀವು ಎಂದಿಗೂ ಬೋರಿಂಗ ಆಸ್ಪತ್ರೆಯಲ್ಲಿ ಹೋಗಿ ನೋಡಿರಲಿಲ್ಲ ಎಂದರೆ ಸಾಕ್ಷಿ ಸರಿ ಇಲ್ಲ ಎಂದು ನುಡಿದಿದ್ದು ಬೋರಿಂಗ ಬೋರಿಂಗ ಆಸ್ಪತ್ರೆ ಲೇಡಿ ಕರ್ಜನ ಆಸ್ಪತ್ರೆ ಹಾಗಾ ತುಮಕೂರಿನಲ್ಲಿ ಹೋಗಿ ನೋಡಿರುವುದಾಗಿ ನುಡಿಯುತ್ತಾರೆ . ಅವರು ಮರಣ ಹೊಂದಿದ ಬಳಿಕ ಕಂದಾಯ ದಾಖಲಾತಿಗಳು 1ನೇ ಪ್ರತಿವಾದಿಯ ಹೆಸರಿಗೆ ಬಂದಿರುತ್ತವ ಎಂದರೆ ಸರಿಯಲ್ಲ. ನಿಮಗೆ ಸದರಿ ವಿಷಯ ತಿಳಿದಿದ್ದರೂ ಪ್ರಮಾಣ ಪತ್ರದ 5ನೇ ಪ್ಯಾ ರದಲ್ಲಿ ಸುಳುಳ ಅಂಶಗಳನ್ನು ನಮೂದಿಸಿರುತ್ತೀರಾ ಎಂದರೆ ಸರಿಯಲ್ಲ. ವಾದಿಯ ಮಗನು ತೀರಿಕೊಂಡ ಬಳಿಕ ಕಾನೂನು ರೀತಿಯಲ್ಲೇ 1ನೇ ಪ್ರತಿವಾದಿಯ ಹೆಸರಿಗೆ ದಾಖಲಾತಿಗಳು ಬದಲಾವಣೆ ಆಗಿರುತ್ತವೆ ಎಂದರೆ ಸರಿಯಲ್ಲ. ವಾದಿಯ ಮಗನು ಅವರ

ಜೀವತಾವಧಿಯಲ್ಲಿ ನಿಮ್ಮ ಬಳಿ ಯಾವುದೇ ರೀತಿಯ ಖುದ್ದು ಮಾಹಿತಿಗಳನ್ನು ಹೇಳುವ ಅಭ್ಯಾಸ ಹೊಂದಿರಲಿಲ್ಲ ಎಂದರೆ ಸರಿಯಲ್ಲ ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**ಸಹಿ/-**
**ಅಪರ ಸಿವಿಲ್ ನ್ಯಾಯಾಧೀಶರು, ತಿಪಟೂರು.**